ಜಿಲ್ಲೆಯವರೇ ಎಂದು ಕಾಣುತ್ತದೆ. ಅವರು ಕೊಟ್ಟಿರುವ ಒಂದಿ ಇದೆ. ಮಾನ್ಯ ಶಿವನಂಜಪ್ಪನವರಿಂದ ಪತ್ರ ಬಂದಮೇಲೆ ಅವರನ್ನೇ ನೋಡಿಕೊಂಡು ಬನ್ನಿ ಎಂದು ಹೇಳಿದೆ. ಹೋಗಿ ನೋಡಿದ್ದಾರೆ. ಆವರ ವರದಿಯ ಆಧಾರದ ಮೇಲೆ ಹೇಳುತ್ತಿದ್ದೇನೆ. ಟ್ಯಾಂಕ್ ಕಟ್ಟುವುದು ಫೀಸಿಬಲ್ ಅಲ್ಲ ಎಂದು ಬರೆಯುತ್ತಾರೆ. ಬೇಕಾದರೆ ನಿಮ್ಮ ಜೊತೆಯಲ್ಲಿ ಅವರನ್ನು ಕಳುಹಿಸಿಕೊಡುತ್ತೇನೆ. ನನಗೇನೂ ಅಡ್ಡಿಯಿಲ್ಲ. ಇದು ನನಗೆ ಬಂದಿರುವ ವರದಿ.

ಬಾಗಲ ಕೋಟೆಯಲ್ಲಿ ಉದಗಟ್ಟಿ ಯಾತ ನೀರಾವರಿ ಯೋಜನೆ

೭೯೨. ಜಿ. ವಿ. ಮಂಟೂರ್ (ಬಾಗಲಕೋಟೆ).— ಮಾನ್ಯ ಲೋಕೋಪಯೋಗಿ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಉದಗಟ್ಟಿ ಯಾತ ನೀರಾವರಿ ಯೋಜನೆಯನ್ನು ನಿರ್ಮಾಣ ಮಾಡುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಆ) ಹಾಗಿದ್ದಲ್ಲಿ ಇದರ ಅಂದಾಜು ವೆಚ್ಚವೆಷ್ಟು ?

ಇ) ಸದರಿ ಯೋಜನೆಯಿಂದ ನೀರಾವರಿಯಾಗುವ ಕ್ಷೇತ್ರವೆಷ್ಟು ?

ಈ) ಈ ಯೋಜನೆಯಿಂದ ಪ್ರಯೋಜನ ಪಡೆಯುವ ಗ್ರಾಮಗಳು ಯಾವುವು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಹೌದು.

ಆ) ೮.೮೪ ಲಕ್ಷ ರೂಗಳು (೧೯೮೪-೮೫ರ ದರ ಪಟ್ಟಿಯಂತೆ)

ಇ) ೪೦೦ ಎಕರೆಗಳು.

ಈ) ಉದಗಟ್ಟಿ ಗ್ರಾಮವು ಪ್ರಯೋಜನ ಪಡೆಯುತ್ತದೆ.

ಶ್ರೀ ಜಿ. ವಿ. ಮಂಟೂರ್.—ಮಾನ್ಯ ಮಂತ್ರಿಗಳು ೧೯೮೬-೮೭ನೇ ಸಾಲಿನಲ್ಲಿ ಕೆಲಸ ಶುರು ಮಾಡುತ್ತಾರೆಯೇ ಎಂದು ಕೇಳುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—೧೯೮೬-೮೭ನೇ ಸಾಲಿನ ಬಜೆಟ್ ನಿಮ್ಮ ಮುಂದೆ ಇಡಲಾಗಿದೆ. ಒಂದೇ ಮಾತು ಹೇಳುತ್ತೇನೆ. ಈ ಕೆಲಸ ೧೯೮೬-೮೭ನೇ ಸಾಲಿನ ಬಜೆಟ್‌ನಲ್ಲಿ ಸೇರಿದ್ದು ೨೦ ಸಾವಿರ ರೂಪಾಯಿಗಳು ಇದಕ್ಕೆ ಪ್ರಾವಿಷನ್ ಮಾಡಿದೆ. ಆದರೆ ಕೆಲಸ ಇನ್ನೂ ತೆಗೆದುಕೊಂಡಿಲ್ಲ. ಸ್ವಾಮಿ, ಈ ಸಂದರ್ಭದಲ್ಲಿ ಆಶ್ವಾಸನೆ ಕೊಡುತ್ತೇನೆ, ಈ ಕೆಲಸವನ್ನು ವರ್ಷ ಕೈಗೆತ್ತಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಣ್ಣ ನೀರಾವರಿ ಯೋಜನೆಗಳಿಗಾಗಿ ೧೯೮೬-೮೭ನೇ ಸಾಲಿನಲ್ಲಿ ಖರ್ಚು ಮಾಡಿದ ಹಣದ ಬಗ್ಗೆ

೯೪೦ ಶ್ರೀ ವಿನಯಕುಮಾರ್ ಸೊರಕೆ (ಪುತ್ತೂರು). ಮಾನ್ಯ ಲೋಕೋಪಯೋಗಿ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಣ್ಣ ನೀರಾವರಿ ಯೋಜನೆಯನ್ವಯ ೧೯೮೬-೮೭ ರಲ್ಲಿ ಖರ್ಚು ಮಾಡಿರುವ ಹಣವೆಷ್ಟು. (ತಾಲ್ಲೂಕುವಾರು ವಿವರ ನೀಡಬೇಕಾಗಿ ವಿನಂತಿ)

ಆ) ಪುತ್ತೂರು ಕ್ಷೇತ್ರಕ್ಕೆ ಹೊಂದಿಕೊಂಡು ಇರುವ ಸಣ್ಣ ಆಣೆಕಟ್ಟು ಹಲವಾರು ವರುಷಗಳಿಂದ ರಿಪೇರಿಯಲ್ಲಿದ್ದು ನೀರನ್ನು ಸರಬರಾಜು ಮಾಡದಿದ್ದರೂ, ರೈತರಿಂದ ನೀರಿನ ತೆರಿಗೆಯನ್ನು ವಸೂಲಿ ಮಾಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?